ದಿನಾಂಕ:-21-08-2021 (ಶನಿವಾರ) ರಂದು ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ ವಾರ್ಡ್ ಸಮಿತಿ ಸಭೆ ನಡವಳಿಗಳು

*********

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ ವಾರ್ಡ್ ಸಮಿತಿ ಸಭೆಯು ದಿನಾಂಕ:-21-08-2021 ಶನಿವಾರ 10.30 ಗಂಟೆಗೆ ನೋಡೆಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ ಉಪ ವಿಭಾಗದ ಕಛೇರಿಯಲ್ಲಿ ನಡೆದಿರುತ್ತದೆ.

<u>ಸಭೆಗೆ ಹಾಜರಾಗಿ ಭಾಗವಹಿಸಿದ ಸದಸ್ಯರು ಮತ್ತು ಸಾರ್ವಜನಿಕರ ವಿವರ</u>

| ಕ್ರ.ಸಂ | ಅಧಿಕಾರಿಗಳು ಮತ್ತು ಸದಸ್ಯರ ಹೆಸರು | ಪದನಾಮ | ಇಲಾಖೆ | ಹಾಜರಾತಿ |
|---|---|---|---|---|
| 1 | ಶ್ರೀ. ರಾಧಕೃಷ್ಣ | ನೋಡಲ್ ಅಧಿಕಾರಿ | ಕಾರ್ಯಪಾಲಕ ಅಭಿಯಂತರರು ಚಾಮರಾಜಪೇಟೆ ವಿಭಾಗ | ಹಾಜರಾಗಿರುತ್ತಾರೆ |
| 2 | ಶ್ರೀ. ಕೆ.ಎಸ್. ಸ್ವಾಮಿ | ಕಾರ್ಯದರ್ಶಿ | ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ | ಹಾಜರಾಗಿರುತ್ತಾರೆ |
| 3 | ಶ್ರೀ. ಮಾರುತಿ ಸೇಟ್ | ಸದಸ್ಯರು | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ | ಹಾಜರಾಗಿರುತ್ತಾರೆ |
| 4 | ಶ್ರೀ. ಎನ್.ಟಿ. ಲಕ್ಷ್ಮೀನರಸಿಂಹಯ್ಯ | ಸದಸ್ಯರು | ತೋಟಗಾರಿಕೆ ಇಲಾಖೆ | ಹಾಜರಾಗಿರುತ್ತಾರೆ |
| 5 | ಶ್ರೀ. ಹನುಮಂತರಾಜು | ಸದಸ್ಯರು | ಪಶು ಸಂಗೋಪನೆ | ಹಾಜರಾಗಿರುತ್ತಾರೆ |
| 6 | ಶ್ರೀ. ಜಿ.ಸಿ. ಬಾಲರಾಜ್ | ಸದಸ್ಯರು | ಕೆಲಸ ಪರಿವೀಕ್ಷಕರು (ಪ್ರಭಾರ) ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ | ಹಾಜರಾಗಿರುತ್ತಾರೆ |
| 7 | ಶ್ರೀಮತಿ. ಸವೀತಾ | ಸದಸ್ಯರು | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ | ಹಾಜರಾಗಿರುತ್ತಾರೆ |
| 8 | ಶ್ರೀ. ಶಿವಕುಮಾರ್ | ಸದಸ್ಯರು | ಬೀದಿ ದೀಪದ ಗುತ್ತಿಗೆದಾರರು | ಹಾಜರಾಗಿರುತ್ತಾರೆ |
| 9 | ಶ್ರೀ. ಸಿ.ಹೆಚ್. ಪೈ | ಸದಸ್ಯರು | ಸಾರ್ವಜನಿಕ ವಿಭಾಗ | ಹಾಜರಾಗಿರುತ್ತಾರೆ |
| 10 | ಶ್ರೀ. ಎಸ್. ಸೋಮಣ್ಣ | ಸದಸ್ಯರು | ಸಾರ್ವಜನಿಕ ವಿಭಾಗ | ಹಾಜರಾಗಿರುತ್ತಾರೆ |
| 11 | ಶ್ರೀ. ಹೊನ್ನೇಗೌಡ | ಸದಸ್ಯರು | ಸಾರ್ವಜನಿಕ ವಿಭಾಗ | ಹಾಜರಾಗಿರುತ್ತಾರೆ |
| 12 | ಶ್ರೀಮಿತಿ. ವೀಣಾ ಅರವಿಂದ್ | ಸದಸ್ಯರು | ಸಾರ್ವಜನಿಕ ವಿಭಾಗ | ಹಾಜರಾಗಿರುತ್ತಾರೆ |
| 13 | ಶ್ರೀ. ಕೃಷ್ಣಪ್ಪ | ಸದಸ್ಯರು | ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ | ಹಾಜರಾಗಿರುತ್ತಾರೆ |
| 14 | ಶ್ರೀ. ಸೋಮಶೇಖರ್ .ಎನ್. | ಸದಸ್ಯರು | ಕಿರಿಯ ಅಭಿಯಂತರರು, ಬೆಸ್ಕಾಂ | ಹಾಜರಾಗಿರುತ್ತಾರೆ |
| 15 | ಶ್ರೀ. ಜಿಜ್ಞೇಶ್ .ಪಿ. | ಸದಸ್ಯರು | ಪೊಲೀಸ್ ಇನ್ಸ್‌ಫೆಕ್ಟರ್ ಸಂಚಾರಿ ಪೊಲೀಸ್ ಠಾಣೆ, 9ನೇ ಮುಖ್ಯರಸ್ತೆ, ಹಂಪಿನಗರ, ಬೆಂಗಳೂರು | ಹಾಜರಾಗಿರುತ್ತಾರೆ |

7. **ಕೋವಿಡ್–19** : ಕೋವಿಡ್–19 ಸಾಂಕ್ರಮಿಕ ರೋಗಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ಹಾಜರಿದ್ದ ಶ್ರೀ. ಮಾರುತಿ ಸೇಟ್ ಹಿರಿಯ ಆರೋಗ್ಯ ಪರಿವೀಕ್ಷಕರು ವಿವರವಾದ ಮಾಹಿತಿಯನ್ನು ನೀಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್–19 ಪರೀಕ್ಷೆಯನ್ನು ನಡೆಸುತ್ತಿದ್ದು ಪ್ರತಿದಿನ 100 ಜನಕ್ಕೆ ಲಸಿಕೆಯನ್ನು ನೀಡಲಾಗುತ್ತಿದೆ ಎಂದು ಸಭೆಯಲ್ಲಿ ಮಾಹಿತಿಯನ್ನು ನೀಡಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಸದಸ್ಯರು ಮತ್ತು ಸ್ವಾರ್ವಜನಿಕರು ಎಲ್ಲಾ ಸಾರ್ವಜನಿಕರಿಗೆ ಸಮರ್ಪಕವಾಗಿ ಲಸಿಕೆ ನೀಡುವಂತೆ ಕೋರಿದ್ದು, ಅದರಂತೆ ಸಾರ್ವಜನಿಕರಿಗೆ ಸಮರ್ಪಕವಾದ ಕೋವಿಡ್–19 ಪರೀಕ್ಷೆ ಹಾಗೂ ಲಸಿಕೆಯನ್ನು ನೀಡುವಂತೆ ನೋಡೆಲ್ ಅಧಿಕಾರಿರವರು ಸಂಬಂಧಪಟ್ಟ ಇಲಾಖೆಗೆ ಸೂಚಿಸಿರುತ್ತಾರೆ.

**ಕ್ರಮ** : ಆರೋಗ್ಯ ಇಲಾಖೆ

ಸಭೆಗೆ ಗೈರು ಹಾಜರಾಗಿರುವ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ತೀವ್ರ ಅಸಮದಾನ ವ್ಯಕ್ತಪಡಿಸಿದ್ದು, ಮುಂದಿನ ಸಭೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ತಪ್ಪದೆ ಹಾಜರಾಗುವಂತೆ ಸಭೆಯು ತೀರ್ಮಾನಿಸಿರುತ್ತದೆ. ಗೈರು ಅಧಿಕಾರಿಗಳಿಗೆ ಸಂಬಂಧಿಸಿದಂತೆ ಅವರ ಇಲಾಖೆಗಳ ಮೇಲಾಧಿಕಾರಿಗಳಿಗೆ ವರದಿ ಮಾಡಲಾಗುವುದೆಂದು ನೊಡಲ್ ಅಧಿಕಾರಿಯವರು ಸೂಚಿಸಿರುತ್ತಾರೆ.

ಅಂತಿಮವಾಗಿ ನೋಡಲ್ ಅಧಿಕಾರಿಯವರು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಹಾಲಿಸಿ ಸ್ಪಂದಿಸಿ ಪರಿಹರಿಸಲು ಕ್ರಮತೆಗೆದುಕೊಂಡು ಸಂಬಂಧಪಟ್ಟ ಇಲಾಖೆಗಳು ಸಮನ್ವತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿರುತ್ತಾರೆ.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ನೋಡಲ್ ಅಧಿಕಾರಿರವರ ಆದೇಶದ ಮೇರೆಗೆ**

**ಕಾರ್ಯದರ್ಶಿ**
**ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ**

**ಪ್ರತಿಯನ್ನು:–**

1. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2. ಮುಖ್ಯ ಅಭಿಯಂತರರು (ದಕ್ಷಣ) ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
3. ಕಾರ್ಯಪಾಲಕ ಅಭಿಯಂತರರು, ವಿಜಯನಗರ ವಿಭಾಗ ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
4. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ ಉಪ ವಿಭಾಗ ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
5. ಕಛೇರಿ ಕಡತಕ್ಕಾಗಿ.

3. **ಪೊಲೀಸ್ ಇಲಾಖೆ** : ಶ್ರೀ. ಹೊನ್ನೇಗೌಡ ಮತ್ತು ಶ್ರೀಮತಿ. ವೀಣಾ ಅರವಿಂದ ರವರು ಮಾತನಾಡಿ ಗಂಗೊಂಡನಹಳ್ಳಿ ಮುಖ್ಯರಸ್ತೆ ಪಾರ್ಕ್ ಸುತ್ತ ಮುತ್ತ ವಾಹನಗಳನ್ನು ನಿಲ್ಲಿಸುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದಾಗಿ ಅಗತ್ಯ ಕ್ರಮವಹಿಸಲು ಕೋರಿರುತ್ತಾರೆ. ಟ್ರಾಫಿಕ್ ಪಿಎಸ್ಐ ರವರು ಮಾತನಾಡಿ ಅಗತ್ಯ ಕ್ರಮವಹಿಸುವುದಾಗಿ ತಿಳಿಸಿರುತ್ತಾರೆ. Illegal Activity ಬಗ್ಗೆ ಯಾವ ಕ್ರಮವಹಿಸಲಾಗಿದೆ ಎಂದು ಶ್ರೀಮತಿ. ವೀಣಾ ಅರವಿಂದ ರವರು ಪೊಲೀಸ್ ಇಲಾಖೆಯವರನ್ನು ಕೋರಲಾಗಿ Law & Order ರವರು ಅಗತ್ಯ ಕ್ರಮವಹಿಸಲು ನೊಡೇಲ್ ಅಧಿಕಾರಿಯವರು ಸೂಚಿಸಿರುತ್ತಾರೆ.

ನಾರಾಯಣ್ ರವರು ಮಾತನಾಡಿ ಚಂದ್ರಾ ಲೇಔಟ್ ಪಾರ್ಕ್ ಹಿಂದೆ ಟೀ ಅಂಗಡಿ ಇದ್ದು, ಅದನ್ನು ತೆರವುಗೊಳಿಸುವಂತೆ ಕೋರಿರುತ್ತಾರೆ. ಸಂಬಂಧಪಟ್ಟ ಇಲಾಖೆಯು ಅಗತ್ಯ ಕ್ರಮವಹಿಸಲು ನೊಡೇಲ್ ಅಧಿಕಾರಿರವರು ಸೂಚಿಸಿರುತ್ತಾರೆ.

**ಕ್ರಮ** : ಪೊಲೀಸ್ ಇಲಾಖೆ

4. **ಬಿಡಬ್ಲ್ಯೂಎಸ್ಎಸ್‌ಬಿ ಇಲಾಖೆ:** ಮ್ಯಾನ್‌ಹೋಲ್-ಬ್ಲಾಕ್ ಆಗಿರುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರು ಇದನ್ನು ಸರಿಪಡಿಸಲು ಹಾಗೂ ಬಿಡಬ್ಲ್ಯೂಎಸ್.ಎಸ್.ಬಿ. ಇಲಾಖೆರವರು ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ ಕತ್ತರಿಸಿರುವ ಬಗ್ಗೆ ಸರಿಪಡಿಸಲು ಕೋರಿದ್ದು, ಈ ಕುರಿತು ಅಗತ್ಯ ಕ್ರಮವಹಿಸಲು ಬಿಡಬ್ಲ್ಯೂಎಸ್.ಎಸ್.ಬಿ. ಇಲಾಖೆರವರಿಗೆ ನೊಡೇಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

**ಕ್ರಮ** : ಬಿಡಬ್ಲ್ಯೂಎಸ್ಎಸ್‌ಬಿ ಇಲಾಖೆ

5. **ಪಶು ಸಂಗೋಪನೆ ಇಲಾಖೆ** : Animal Waste ತೆಗೆಯುವ ಬಗ್ಗೆ ಕ್ರಮವಹಿಸಲು ಕೋರಿದಾಗ ಈ ಕುರಿತು ಮೇಲಾದಿಕಾರಿಗಳ ನಿರ್ದೇಶನದಂತೆ ಅಗತ್ಯ ಕ್ರಮಕೈಗೊಳ್ಳುವುದಾಗಿ ಹನುಮಂತರಾಜು ರವರು ತಿಳಿಸಿರುತ್ತಾರೆ. ಬೀದಿ ನಾಯಿಗಳ ಬಗ್ಗೆ ಅಗತ್ಯ ಕ್ರಮವಹಿಸಲು ನಾರಾಯಣ್ ರವರು ಕೋರಿದ್ದು, ಬಿನ್ನಿ ಲೇಔಟ್, ಮಾರುತಿ ಬಡಾವಣೆಗಳಲ್ಲಿ ಹೆಚ್ಚು ಬೀದಿ ನಾಯಿಗಳಿದ್ದು, ಈ ಕುರಿತು ಅಗತ್ಯ ಕ್ರಮವಹಿಸುವಂತೆ ನೋಡೆಲ್ ಅಧಿಕಾರಿಯವರು ಸೂಚಿಸಿರುತ್ತಾರೆ.

**ಕ್ರಮ** : ಪಶು ಸಂಗೋಪನೆ ಇಲಾಖೆ

6. **ತೋಟಗಾರಿಕೆ ಇಲಾಖೆ** : ನಾರಾಯಣ್ ರವರು ಮಾತನಾಡಿ ಚಂದ್ರಾ ಲೇಔಟ್ ಪಾರ್ಕ್‌ನ್ನು ಸ್ವಚ್ಛಗೊಳಿಸುವಂತೆ ಕೋರಿದ್ದು, ಹಜರಿದ್ದ ತೋಟಗಾರಿಕೆ ಇಲಾಖೆಯ ಲಕ್ಷ್ಮೀನರಸಿಂಹಯ್ಯ ರವರು ಅಗತ್ಯ ಕ್ರಮವಹಿಸುವುದಾಗಿ ತಿಳಿಸಿರುತ್ತಾರೆ.

**ಕ್ರಮ** : ತೋಟಗಾರಿಕೆ ಇಲಾಖೆ

| | | | | |
|---|---|---|---|---|
| 16 | | ಸದಸ್ಯರು | ವಲಯ ಅರಣ್ಯಾಧಿಕಾರಿ | ಗೈರು ಹಾಜರಾಗಿರುತ್ತಾರೆ |
| 17 | | ಸದಸ್ಯರು | ಕಲ್ಯಾಣಾಧಿಕಾರಿ ದಕ್ಷಿಣ ವಲಯ | ಗೈರು ಹಾಜರಾಗಿರುತ್ತಾರೆ |
| 18 | | ಸದಸ್ಯರು | ಪೊಲೀಸ್ ಇನ್ಸ್‌ಫೆಕ್ಟರ್ ಕಾನೂನು ಮತ್ತು ಸುವ್ಯವಸ್ಥೆ ಚಂದ್ರಾ ಲೇಔಟ್ | ಗೈರು ಹಾಜರಾಗಿರುತ್ತಾರೆ |
| 19 | | ಸದಸ್ಯರು | ಆರೋಗ್ಯ ವೈಧ್ಯಾಧಿಕಾರಿಗಳು | ಗೈರು ಹಾಜರಾಗಿರುತ್ತಾರೆ |
| 20 | | ಸದಸ್ಯರು | ಕಂದಾಯ ಇಲಾಖೆ | ಗೈರು ಹಾಜರಾಗಿರುತ್ತಾರೆ |

ವಾರ್ಡ್ ಕಮಿಟಿ ಸಭೆಯನ್ನು ನಡೆಸುವ ಕುರಿತಾಗಿ ದಿನಾಂಕ:-16-08-2021 ರಂದು ಸಭೆಯ ಸೂಚನಾ ಪತ್ರವನ್ನು ವಾರ್ಡ್ ಸಂಖ್ಯೆ : 132ಕ್ಕೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಗೆ ಕಳುಹಿಸಿಕೊಡಲಾಗಿರುತ್ತದೆ ಹಾಗೂ ವಾರ್ಡ್ ಸಂಖ್ಯೆ : 132 ವಾಟ್ಸ್ ಆಫ್ ಗ್ರೂಪ್‌ಗೆ ಸದರಿ ಸಭೆಯ ಸೂಚನಾ ಪತ್ರವನ್ನು ಹಾಕಲಾಗಿರುತ್ತದೆ.

ಸಭೆಯ ಪ್ರಾರಂಭಿಕ ಹಂತದಲ್ಲಿ ವಾರ್ಡ್ ಕಾರ್ಯದರ್ಶಿ ರವರು ಸಭೆಗೆ ಹಾಜರಿದ್ದ ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರನ್ನು ಸ್ವಾಗತಿಸಿದರು.

**ಸಭೆಯಲ್ಲಿ ಸಾರ್ವಜನಿಕ ದೂರುಗಳಿಗೆ ಸಂಬಂಧಿಸಿದಂತೆ ಚರ್ಚಿಸಲಾಯಿತು.**

1. **ಘನತ್ಯಾಜ್ಯ ನಿರ್ವಹಣೆ** : ಸಭೆಯಲ್ಲಿ ಹಾಜರಿದ್ದ ನಾರಾಯಣ್ ರವರು ಮಾತನಾಡಿ ಸಮರ್ಪಕವಾಗಿ ಕಸವನ್ನು ನಿರ್ವಹಣೆ ಮಾಡುತ್ತಿಲ್ಲವೆಂದು ದೂರಿರುತ್ತಾರೆ. ಕಿರಿಯ ಆರೋಗ್ಯ ಪರಿವೀಕ್ಷರವರು ಮಾತನಾಡಿ ಗುತ್ತಿಗೆದಾರರು ಸಮರ್ಪಕವಾಗಿ ನಿರ್ವಹಿಸುವಂತೆ ಕ್ರಮವಹಿಸಲಾಗುವುದು ಎಂದು ತಿಳಿಸಿರುತ್ತಾರೆ. Animal Waste ಅನ್ನು ಪಶು ಸಂಗೋಪನಾ ಇಲಾಖೆಯವರೇ ನಿರ್ವಹಿಸಬೇಕೆಂದು ಕಿರಿಯ ಆರೋಗ್ಯ ಪರಿವೀಕ್ಷಕರವರು ತಿಳಿಸಿರುತ್ತಾರೆ. ಈ ಕುರಿತು ಎರಡು ಇಲಾಖೆಯವರು ಪರಸ್ಪರ ಸಮನ್ವತೆಯೊಂದಿಗೆ ಕಾರ್ಯನಿರ್ವಹಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಬೇಕೆಂದು ನೊಡೇಲ್ ಅಧಿಕಾರಿರವರು ಸೂಚಿಸಿರುತ್ತಾರೆ.

**ಕ್ರಮ** : ಘನತ್ಯಾಜ್ಯ ನಿರ್ವಹಣೆ ಇಲಾಖೆ
& ಪಶು ಸಂಗೋಪನಾ ಇಲಾಖೆ

2. **ಬೀದಿ ದೀಪ** : ಚಂದ್ರಾ ಲೇಔಟ್ ನಲ್ಲಿ ಎಲ್.ಇ.ಡಿ. ಲೈಟ್ ಅಳವಡಿಸಲು ನಾರಾಯಣ್ ರವರು ಕೋರಿರುತ್ತಾರೆ. ಸಭೆಯಲ್ಲಿ ಹಾಜರಿದ್ದ ಜಿ. ಮೂರ್ತಿ, ಸಹಾಯಕ ಅಭಿಯಂತರವರು, ಬೆಸ್ಕಾಂ (ದಕ್ಷಿಣ), ಜಯನಗರ ರವರು ಮಾತನಾಡಿ ಟೆಂಡರ್ ಪ್ರಕ್ರಿಯೆ ಚಾಲನೆಯಿದ್ದು, Tender Process ಪೂರ್ಣಗೊಂಡ ನಂತರ ಕ್ರಮ ವಹಿಸಲಾಗುವುದೆಂದು ತಿಳಿಸಿರುತ್ತಾರೆ.
   ಸಮಿತಿ ಸದಸ್ಯರಾದ ಪೈ ರವರು ಮಾತನಾಡಿ ಸ್ಕೈಲೈನ್ ಎದುರು ಬಿಬಿಎಂಪಿ ಪಾಲಿಕೆಯಲ್ಲಿ ಲೈಟ್ ಇರುವುದಿಲ್ಲವೆಂದು ಈ ಕುರಿತು ಕ್ರಮವಹಿಸಲು ಕೋರಿರುತ್ತಾರೆ. ಜಿ.ಮೂರ್ತಿ, ಸಹಾಯಕ ಅಭಿಯಂತರವರು ಅಗತ್ಯ ಕ್ರಮವಹಿಸುವುದಾಗಿ ತಿಳಿಸಿರುತ್ತಾರೆ. ಸಂಬಂಧಪಟ್ಟ ಇಲಾಖೆಯು ಅಗತ್ಯ ಕ್ರಮವಹಿಸಲು ನೊಡೇಲ್ ಅಧಿಕಾರಿರವರು ಸೂಚಿಸಿರುತ್ತಾರೆ.

**ಕ್ರಮ** : ಬೆಸ್ಕಾಂ ಹಾಗೂ ಬೀದಿ ದೀಪ ವಿಭಾಗ